**CC 4467/2023**

**ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಗಳ ನ್ಯಾಯಾಲಯ, ಹೊಸಪೇಟೆ.**

**ಸಿಸಿ ನಂಬರ್ 4467/2023**

**ಸಿ ಡಬ್ಲ್ಯೂ - 6**
**ಪಿ ಡಬ್ಲ್ಯೂ - 5**

| | |
|---|---|
| **ಸಾಕ್ಷಿಯ ಹೆಸರು -** | **ವಿಜಯಲಕ್ಷ್ಮೀ** |
| **ಗಂಡನ ಹೆಸರು -** | **ಮಲ್ಲಿಕಾರ್ಜುನ** |
| **ವಯಸ್ಸು -** | **54 ವರ್ಷಗಳು** |
| **ಉದ್ಯೋಗ -** | **ಲೇಡಿಸ್ ಟೈಲರ್** |
| **ವಾಸಸ್ಥಳ -** | **ಬಳ್ಳಾರಿ** |

**ಸಾಕ್ಷಿಯನ್ನು ದಿನಾಂಕಃ 18-09-2025 ರಂದು ಪ್ರಾಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎ. ಪಿ. ಪಿ. ಅವರಿಂದ**

ಚಾಸಾ **-1** ನನ್ನ ತಂಗಿ. ದಿಃ **13-12-2021** ರಂದು ಚಾಸಾ **5** ನನಗೆ ಕರೆ ಮಾಡಿ ಅವರ ಮನಯಲ್ಲಿ ಕಳ್ಳತನ ಆಗಿರುವ ಬಗ್ಗೆ ನನಗೆ ತಿಳಿಸಿದರು. ಸದರಿಯವರು ಮನೆಯಲ್ಲಿದ್ದ ದುಡ್ಡು, ಬಂಗಾರ ಮತ್ತು ಬೆಳ್ಳಿ ಕಳ್ಳತನ ಆಗಿದೆ ಎಂದು ತಿಳಿಸಿದರು. ಕಳ್ಳತನ ಆದ ಬಂಗಾರದ ಆಭರಣಗಳಲ್ಲಿ ತಾಳಿ ಚೈನ್, ಶಾರ್ಟ ಚೈನ್, ಬೆಂಡೋಲೆ, ಉಂಗುರಗಳು ಇದ್ದವು. ಬೆಳ್ಳಿ ವಿಗ್ರಹಗಳು, ಕಳಸ, ದೀಪಗಳು, ಗ್ಲಾಸ್ ಕಳ್ಳತನ ಆಗಿದ್ದವು. ರೂ. **2-3** ಲಕ್ಷ ಹಣ ಕಳ್ಳತನ ಆಗಿತ್ತು.

ನಾನು ದಿಃ **15-12-2021** ರಂದು ಚಾಸಾ **-1** ರವರ ಮನೆಗೆ ಬಂದಿದ್ದೆ. ಆಗ ಪೋಲಿಸರು ಬಂದು ಪಂಚನಾಮೆ ಮಾಡಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಬಿ ಸಿ ಎಂ., ವಕೀಲರಿಂದ**

ಚಾಸಾ -1 ರವರು ಕರೆ ಮಾಡಿದ ದಿನದಂದೇ ನಾನು ಹೊಸಪೇಟೆಗೆ ಬಂದಿರಲಿಲ್ಲ. ಚಾಸಾ -1 ರವರು ಹೇಳಿದ್ದರಿಂದಲೇ ಇಂತಹ ಒಡವೆಗಳು ಕಳ್ಳತನ ಆಗಿವೆ ಎಂದು ಗೊತ್ತಾಯಿತು ಅಂದರೆ ಸರಿ.

ಯಾವ ಪೋಲಿಸರು ಸ್ಥಳಕ್ಕೆ ಬಂದಿದ್ದರು ಅಂದರೆ ನನಗೆ ಗೊತ್ತಿಲ್ಲ. ಪಂಚನಾಮೆಗೆ ನಾನು ಸಹಿ ಮಾಡಿಲ್ಲ. ನಾನು ಹೇಳಿಕೆಯನ್ನು ಯಾವ ಪೋಲಿಸರ ಮುಂದೆ ನೀಡಿರುತ್ತೇನೆ ಎಂದು ಅವರ ಹೆಸರು ಹೇಳಲು ಆಗುವುದಿಲ್ಲ. ಆ ದಿನ ಚಾಸಾ -1 ರವರ ಮನೆಯಲ್ಲಿ ಯಾವುದೇ ಕಳ್ಳತನ ಆಗಿಲ್ಲ ಅಂದರೆ ಸರಿಯಲ್ಲ. ನನ್ನ ತಂಗಿಯ ಮಾತು ಕೇಳಿ, ನಾನು ಯಾವುದೇ ಹೇಳಿಕೆ ನೀಡದಿದ್ದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

**(**ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**)**

ಓ. ಹೆ. ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು
ಹಾಗೂ ಜೆ.ಎಂ.ಎಫ್.ಸಿ., ಹೊಸಪೇಟೆ.